**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 2209/2025 ಸಿ.ಡಬ್ಲ್ಯೂ.8 ಪಿ.ಡಬ್ಲ್ಯೂ.4

| | |
|---|---|
| ಹೆಸರು | ಶಾಂತಪ್ಪ |
| ತಂದೆ/ಗಂಡ | ನಿಂಗಪ್ಪ |
| ವಯಸ್ಸು | 54 ವರ್ಷ |
| ಉದ್ಯೋಗ | ಎ.ಎಸ್.ಐ ಮಾದನ ಹಿಪ್ಪರಗ |
| ವಾಸಸ್ಥಳ | ಮಾದನ ಹಿಪ್ಪರಗ |

ದಿನಾಂಕ 17-12-2025
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು ದಿನಾಂಕಃ 15.08.2024 ರಿಂದ ಇಲ್ಲಿಯವರೆಗೆ ಮಾದನ ಹಿಪ್ಪರಗ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 22-02-2025 ರಂದು ನಾನು ಠಾಣಾಧಿಕಾರಿಯ ಕರ್ತವ್ಯದಲ್ಲಿದ್ದಾಗ ಚಾಸ-1ರವರು ಠಾಣೆಗೆ ಹಾಜರಾಗಿ ಒಂದು ಅಸಲು ಜಪ್ತಿ ಪಂಚನಾಮೆ, ಮುದ್ದೆಮಾಲು ಮತ್ತು ಆರೋಪಿಯನ್ನು ಹಾಜರಪಡಿಸಿ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಿದ ಮೇರೆಗೆ ನಾನು ಮಾದನ ಹಿಪ್ಪರಗ ಠಾಣೆ ಗುನ್ನಾ ಸಂಖ್ಯೆ 17/2025 ಅಂತಾ ದಾಖಲಿಸಿಕೊಂಡು ತನಿಖೆ ಕೈಗೊಂಡು ಅದೇ ದಿನ 22.02.2025 ರಂದು ಮಧ್ಯಾಹ್ನ 1.00 ಗಂಟೆಗೆ ಆ ಪ್ರಕರಣದ ಪ್ರ.ವ.ವ.ವರದಿಯನ್ನು ನಮ್ಮ ಸಿಬ್ಬಂದಿಯ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿ, ಅದೇ ದಿನ ಆರೋಪಿಯ ಸ್ವ ಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ 22.02.2025 ರಂದು ಆರೋಪಿಗೆ ಕಲಂ 35 ಬಿ ಎನ್ ಎಸ್ ಪ್ರಕಾರ ನೋಟಿಸ್ ನೀಡಿರುತ್ತೇನೆ. ಅದೇ ದಿನ ಚಾಸ-4ರವರ ದಾಳಿಗೆ ಸಂಬಂದಿಸಿದ ಹಾಗೂ 63 ಬಿ ಎಸ್ ಎ ಪ್ರಕಾರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಮತ್ತು ಅದೇ ದಿನ ಚಾಸ-5ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 04.03.2025 ರಂದು ಚಾಸ-6ರವರ FSL ವರದಿಯನ್ನು ಪಡೆಯಲು ಮು.ಮಾಲನ್ನು ಸಲ್ಲಿಸಿದ ಬಗ್ಗೆ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 01.04.2025 ರಂದು ಡಿ ವೈ ಎಸ್ಪಿ ಕಚೇರಿಯಿಂದ FSL ವರದಿಯನ್ನು ತೆಗೆದುಕೊಂಡಿರುತ್ತೇನೆ. ಅದೇ ದಿನ 01.04.2025 ರಂದು ಆರೋಪಿಯ ಮೇಲೆ ಸಾಕಷ್ಟು ಸಾಕ್ಷಾಧಾರಗಳು ಕಂಡು ಬಂದ ಕಾರಣ ಆರೋಪಿಯ ವಿರುದ್ಧ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ಪ್ರ.ವ.ವ.ವರದಿಯ ಮೇಲೆ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಪ್ರ.ವ.ವ.ವರದಿಯನ್ನು ನಿಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು

ಜ್ಞಾಪನ ಪತ್ರದಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.4, ಸಾಕ್ಷಿಯ ಸಹಿಯನ್ನು ನಿಪಿ. 4 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ. 2 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 2(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ಕಲಂ-63(4) ಬಿ.ಎಸ್.ಎ ಅಡಿಯಲ್ಲಿ ಸಲ್ಲಿಸಿದ ಸರ್ಟಿಫೀಕೆಟನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 5, ಸಾಕ್ಷಿಯ ಸಹಿಯನ್ನು ನಿಪಿ. 5 (ಎ) ಅಂತಾ ಗುರುತಿಸಲಾಯಿತು. ದಿಃ 04-03-2025 ರಂದು ಸಲ್ಲಿಸಿದ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6 (ಎ) ಅಂತಾ ಗುರುತಿಸಲಾಯಿತು. ದಿಃ 24-03-2025 ರಂದು FSL ಗೆ ಕಳುಹಿಸಿದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 7, ಸಾಕ್ಷಿಯ ಸಹಿಯನ್ನು ನಿಪಿ-7 (ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಈಗಾಗಲೇ ಗುರುತಿಸಲಾದ ಮು. ಮಾ.1 ಮತ್ತು 2 ನ್ನು ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಎಸ್ ಸಿ  ವಕೀಲರಿಂದ:</u>

ದಿಃ 22-02-2025 ರಂದು ಚಾಸಾ 1 ರವರು ಟೈಪ್ ಮಾಡಿದ ದೂರನ್ನು ನೀಡಿರುತ್ತಾರೆ. ಸದರಿ ದೂರನ್ನು ಎಲ್ಲಿ ಟೈಪ ಮಾಡಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ, ನನ್ನ ಮುಂದೆ ಟೈಪ್ ಮಾಡಿದ ದೂರನ್ನು ಹಾಜರುಪಡಿಸಿರುತ್ತಾರೆ. ನಾನು ಸದರಿ ದೂರನ್ನು ಸಂಪೂರ್ಣವಾಗಿ ಓದಿ ನೋಡಿರುತ್ತೇನೆ. ನಿಪಿ. 4 ರಲ್ಲಿ ಸಮಯ 8.30 ಅಂತಾ ನಮೂದಿಸಿದ್ದು ಅದು ಬೆಳಿಗ್ಗೆ ಅಥವಾ ರಾತ್ರಿ ಅಂತಾ ನಮೂದು ಆಗಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಬೆ.8.30 ಇದ್ದು, ನಜರಚೂಕಿನಿಂದ ನಮೂದು ಆಗಿಲ್ಲ ಅಂತಾ ನುಡಿಯುತ್ತಾರೆ. ಸದರಿ ವಿಷಯದ ಬಗ್ಗೆ ನ್ಯಾಯಾಲಯಕ್ಕೆ ನಾನು ಮನವಿಯನ್ನು ಮಾಡಿರುವುದಿಲ್ಲ.

<u>ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಆಲಿಸಿ ನೀಡಲಾಯತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ